## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **768/2015**

ಸಿ.ಡಬ್ಲ್ಯೂ- 6
ಪಿ.ಡಬ್ಲ್ಯೂ- 5

**ದಿನಾಂಕಃ 11-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಜನಾರ್ಧನ ರೋಗಿ |
| ತಂದೆಯ/ಗಂಡನ ಹೆಸರು | : | ನಾರಾಯಣ ರಾವ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ನಿವೃತ್ತ FDA |
| ವಾಸ ಸ್ಥಳ | : | ಗುಲ್ಬರ್ಗಾ |
| ತಾಲೂಕು | : | ಗುಲ್ಬರ್ಗಾ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ನಾನು ನಿಪ್ಪಾಣಿಯ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ದಿಃ 27-12-2007 ರಿಂದ 30-06-2017 ರವರೆಗೆ FDA ಆಗಿ ಕರ್ತವ್ಯ ನಿರ್ವಹಿಸಿದ್ದು ಆ ಸಮಯದಲ್ಲಿ ದಿಃ 11-08-2010 ರ ಅವಧಿಯಲ್ಲಿ 3 ದಿನಗಳ ಕಾಲ ಗೋಕಾಕನ ಉಪ-ನೋಂದಣಾಧಿಕಾರಿ ಕಚೇರಿಯ ಪ್ರಭಾರ ಉಪ-ನೋಂದಣಾಧಿಕಾರಿ ಎಂದು ನನ್ನನ್ನು ನೇಮಿಸಿರುತ್ತಾರೆ. ದಿಃ 11-08-2010 ರಂದು ಮೂಡಲಗಿಯ ಸರ್ವೇ ನಂ. 376/9 ಒಟ್ಟು ಕ್ಷೇತ್ರ 01 ಎಕರೆ 10 ಗುಂಟೆ ಜಮೀನನ್ನು ಗೌರವ್ವ ಕಳಲನ್ನವರ, ಸದಾಶಿವ ಕಳಸನ್ನವರ, ಪಾಂಡಪ್ಪ ಕಳಸನ್ನವರ, ಗೌರವ್ವ ಯಲ್ಲಪ್ಪ ಕಳಸನ್ನವರ, ಮಾನಿಂಗ ಕಳಸನ್ನವರ, ಶಾಂತವ್ವ ಕಳಸನ್ನವರ ಮತ್ತು ಪಾಂಡು ಕಳಸನ್ನವರ ಒಟ್ಟು 7 ಜನ ಸೇರಿ ಯಲ್ಲಪ್ಪ ಕೇದಾರಪ್ಪ ಖಾನಪ್ಪಗೋಳ ಇವರಿಗೆ ಒಟ್ಟು ಖರೀದಿ ಹಣ ರೂ.2,48,000/- ಗೆ ಖರೀದಿ ಕೊಟ್ಟಿದ್ದು, ನಾನು ಅದಕ್ಕೆ ತಗುಲುವ ಮುದ್ರಣಾಂಕ ಶುಲ್ಕ ರೂ. 16,740/- ಮತ್ತು ನೋಂದಣಿ ಶುಲ್ಕ ರೂ. 2,730/- ಗಳನ್ನು ತೆಗೆದುಕೊಂಡು ಖರೀದಿ ಪತ್ರವನ್ನು ನೋಂದುಮಾಡಿ ಕೊಟ್ಟಿರುತ್ತೇನೆ. ನನ್ನ ಮುಂದೆ ಆ ಸಮಯದಲ್ಲಿ ಖರೀದಿದಾರರಾದ ಯಲ್ಲಪ್ಪ ಕೇದಾರಪ್ಪ ಖಾನಪ್ಪಗೋಳ ಮತ್ತು ಖರೀದಿ ಕೊಟ್ಟ 7 ಜನರಾದ ಗೌರವ್ವ ಕಳಲನ್ನವರ, ಸದಾಶಿವ ಕಳಸನ್ನವರ, ಪಾಂಡಪ್ಪ ಕಳಸನ್ನವರ, ಗೌರವ್ವ ಯಲ್ಲಪ್ಪ ಕಳಸನ್ನವರ, ಮಾನಿಂಗ ಕಳಸನ್ನವರ, ಶಾಂತವ್ವ ಕಳಸನ್ನವರ ಮತ್ತು ಪಾಂಡು ಕಳಸನ್ನವರ ಇವರು ಹಾಜರಿದ್ದು ಸಹಿ ಮಾಡಿದ್ದು Biometric ಮತ್ತು ಪೊಟೋವನ್ನು ತೆಗೆದುಕೊಂಡು ಇಬ್ಬರು ಸಾಕ್ಷಿದಾರರಾದ ಎಸ್ ಡಿ ಬಡಿಗೇರ, ಮೂಡಲಗಿ ಮತ್ತು ಕೆ ಹೆಚ್ ಬಡಗಣ್ಣವರ, ಮೂಡಲಗಿ ಇವರು ಹಾಜರಿದ್ದು ನನ್ನ ಸಮಕ್ಷಮ ಮೇಲೆ ಹೇಳಿದ

ಸಿ.ಸಿ. ನಂಃ 768/2015

ಸಿ.ಡಬ್ಲ್ಯೂ- 6

ಪಿ.ಡಬ್ಲ್ಯೂ- 5

ಎಲ್ಲ ವ್ಯಕ್ತಿಗಳು ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ-1 ದಾಖಲಾತಿಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನ್ಯಾ ದ ಮುಂದಿರುವ ಆರೋಪಿತರನ್ನು ನೋಡಿದರೆ ತುಂಬಾ ದಿನಗಳಾಗಿರುವುದರಿಂದ ಗುರುತಿಸಲಾಗುವುದಿಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ Sri.SMB ವಕೀಲರಿಂದಃ</u>**

ನಾನು ಗೋಕಾಕನ  ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಪ್ರಭಾರ ಉಪ ನೋಂದಣಾಧಿಕಾರಿ ಎಂದು 3 ದಿನಗಳ ಕಾಲ ನೇಮಕವಾಗಿದ್ದರ ಬಗ್ಗೆ ತನಿಖಾಧಿಕಾರಿಗೆ ದಾಖಲಾತಿ ನೀಡಿರುತ್ತೇನೆ. ಆ ರೀತಿ ದಾಖಲಾತಿಯನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನೋಂದಣಿಯಾದ ದಿನದಿಂದ ಇಲ್ಲಿಯವರೆಗೂ ನೋಂದಣಿ ಖೊಟ್ಟಿಯಾಗಿರುತ್ತದೆ ಎಂದು ನನ್ನ ಮುಂದೆ ಯಾವುದೇ ದೂರು ದಾಖಲಾಗಿರುವುದಿಲ್ಲ. ಯಾವುದೇ ನೋಂದಣಿ ಮಾಡುವಾಗ ಅವರ ಗುರುತಿನ ಚೀಟಿಗಳು ಮತ್ತು ಎಲ್ಲಾ ದಾಖಲಾತಿಗಳನ್ನು ಖುದ್ದಾಗಿ ಪರಿಶೀಲಿಸಿ ನೋಂದಣಿ ಪ್ರಕ್ರಿಯೆ ಮಾಡುತ್ತೇವೆ ಎಂದರೆ ಸರಿ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನೋಂದಣಿ ಪ್ರಕ್ರಿಯೆ ಸಮಯದಲ್ಲಿ ಖರೀದಿ ಕೊಡಲು ಬಂದ ಆಸ್ತಿ ಸರ್ವೇ ನಂ. 376/9 ಖರೀದಿ ಕೊಡಲು ಬಂದ 7 ಜನರ ಹೆಸರಿನಲ್ಲಿ ಇತ್ತು. 7 ಜನರ ಹೆಸರು ಸರ್ವೇ ನಂ. 376/9 ಪಹಣಿ ಪತ್ರಿಕೆಯಲ್ಲಿ ಇರುವುದನ್ನು ನಾನು ಪರಿಶೀಲಿಸಿ ಸರಿ ಇದೆ ಎಂದು ನೋಂದಣಿ ಮಾಡಿರುತ್ತೇನೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,

ಮೂಡಲಗಿ.